ಶ್ರೀ ಸಿ. ಬೈರೇಗೌಡ:- ನಿಯಮಾವಳಿಯಲ್ಲಿ ಇಲ್ಲದಿದ್ದರೂ ಸಹ ಇದು ಸರ್ಕಾರ ನಾಮ ನಿರ್ದೇಶನ ಮಾಡಿರತಕ್ಕದ್ದು ಅವರನ್ನು ತೆಗೆಯತಕ್ಕ ಅಧಿಕಾರ ಸರ್ಕಾರಕ್ಕೆ ಇದೆ. ಉದ್ದೇಶಪೂರ್ವಕ-ವಾಗಿ ಈ ರೀತಿಯಾಗಿ ಮಾಡಿದ್ದರೆ ಅಂತಹವರನ್ನು ತೆಗೆಯುತ್ತೇವೆ ಎನ್ನತಕ್ಕ ಮಾತನ್ನು ಮತ್ತೊಂದು ಸಾರಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೆ, ಈ ನಕಲಿ ಅಂಕಪಟ್ಟಿಯ ಜಾಲ ಇದು ಬಹಳ ದೊಡ್ಡದಾಗಿ ಬೆಳೆಯುತ್ತಿದೆ.

ಉಪಾಧ್ಯಕ್ಷರು:- ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ ನಾಳೆ ಪ್ರಸ್ತಾಪ ಮಾಡಿ. ಈಗ ಮಾನ್ಯ ಬಾಲಕೃಷ್ಣರವರು ಸಾರಿಗೆ ಮಂತ್ರಿಗಳಲ್ಲಿ ಒಂದು ವಿಚಾರ ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಮಂತ್ರಿಗಳ ಗಮನ ಸೆಳೆಯಲಿ.

(ಬ) ಮಾಗಡಿಯಲ್ಲಿ ಬಸ್ಸುಗಳ ಸೌಕರ್ಯ ಕುರಿತು.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಬಾಲಕೃಷ್ಣ ರವರ ಪ್ರಶ್ನೆ ಇಷ್ಟೆ, ಮಾಗಡಿ–ಬೆಂಗಳೂರು ಪ್ರೈವೇಟ್ ಬಸ್‌ನವರು ಏಳೂವರೆ ರೂಪಾಯಿ ಇದ್ದದನ್ನು ಈಗ ಹನ್ನೊಂದು ರೂಪಾಯಿ ಮಾಡಿದ್ದಾರೆ. ಒಂದು ಒಂದೂವರೆ ರೂಪಾಯಿ ಜಾಸ್ತಿ ಮಾಡಿದರೆ ಅವರದೇನು ಆಭ್ಯಂತರವಿಲ್ಲ. ತಮಗೆ ಗೊತ್ತಿದೆ ಅಲ್ಲಿಂದ ಇಲ್ಲಿಗೆ ಒಂದು ಹದಿನೈದು ಲೀಟರ್ ಡೀಸಲ್ ಜಾಸ್ತಿಯಾಗಬಹುದು. ಒಂದು ರೂಪಾಯಿ ಜಾಸ್ತಿ ಮಾಡಿದರೂ ಅವನು ಲಾಭದಾಯಕ-ವಾಗಿ ಬಸ್ ನಡೆಸಬಹುದು. ಇವತ್ತು ಏಳೂವರೆ ರೂಪಾಯಿಗಳಿಂದ ಹನ್ನೊಂದು ರೂಪಾಯಿ ಮಾಡಿದ್ದಾರೆ. ಇವತ್ತಿನ ಪರಿಸ್ಥಿತಿನಲ್ಲಿ ಜನರು ಹೇಗೆ ಅದನ್ನು ಭರಿಸಲಿಕ್ಕೆ ಸಾಧ್ಯವಿದೆ? ಅದಕ್ಕೋಸ್ಕರ ಅವರು ಪ್ರೊಟೆಸ್ಟ್ ಮಾಡಿದರು. ತಾವು ಸಹ ಆಲ್ಟರ್‌ನೇಟಿವ್ ಆಗಿ ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಬಿಟ್ಟಿದ್ದಿರಿ, ಯಾವ ಕಾರಣಕ್ಕೊ ಅವುಗಳನ್ನು ನಿಲ್ಲಿಸಿದ್ದೀರಿ. ಮಾತುಕತೆ ಮಾಡಿ ಇವತ್ತೆ ಏಳೂವರೆ ಇದ್ದರೆ ಅದನ್ನು ಎಂಟು ಅಥವಾ ಎಂಟೂವರೆ ಮಾಡಿ ಬಸ್ ಓಡಿಸುವ ವ್ಯವಸ್ಥೆ ಮಾಡಿಸಿ, ಇಲ್ಲ-ವೆಂದರೆ ಖಾಸಗಿ ಬಸ್ ಮಾಲೀಕರು ಕಿರುಕುಳ ಕೊಡುವಂತಹ ಸಂರ್ಭದಲ್ಲಿ ಆಲ್ಟರ್‌ನೆಟಿವ್ ವ್ಯವಸ್ಥೆ ಮಾಡಿ ಅವರಿಗೆ ಬುದ್ಧಿ ಕಲಿಸುವಂತಹ ವ್ಯವಸ್ಥೆಯನ್ನಾದರೂ ಮಾಡಬೇಕೆಂದು ಮಾನ್ಯ ಸದಸ್ಯರ ಒತ್ತಾಯ. ಇದರ ಬಗ್ಗೆ ಮಾನ್ಯಮಂತ್ರಿಗಳು ಉತ್ತರ ಕೊಡಲಿ.

ಉಪಾಧ್ಯಕ್ಷರು:- ಈಗ ಉತ್ತರ ಬೇಡ, ಡಿಮ್ಯಾಂಡ್ ಮೇಲೆ ಉತ್ತರ ಕೊಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಒಂದು ನಿಮಿಷ. ಉಪಾಧ್ಯಕ್ಷರಿಗೆ ನಮ್ಮ ಮೇಲೆ ಕರುಣೆ ಇಲ್ಲವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):- ಮಾಗಡಿಯಿಂದ ಬೆಂಗಳೂರಿಗೆ, ಗ್ರಾಮಾಂತರ ಪ್ರದೇಶದ ಕೆಲವು ಕಡೆಗಳಲ್ಲಿ ನಮ್ಮ ನಾಗರೀಕರಿಗೆ, ಪ್ರಯಾಣಿಕರಿಗೆ ಎರಡು ಮೂರು

ದಿನಗಳಿಂದ ತೊಂದರೆಯಾಗಿತಕ್ಕಂಥಾದ್ದು ನಿಜ. ಗೌರವಾನ್ವಿತ ಮಾಗಡಿ ಕ್ಷೇತ್ರದ ಶಾಸಕರಾಗಿರತಕ್ಕಂಥ ಶ್ರೀ ಬಾಲಕೃಷ್ಣರವರು ಮತ್ತು ಇತರೆ ಕೆಲವು ಸದಸ್ಯರು, ಮುಖಂಡರುಗಳು ನನ್ನಲ್ಲಿಗೆ ನಿನ್ನೆ ದಿವಸ ಬಂದು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಈ ವಿಷಯವನ್ನು ನನ್ನ ಗಮನಕ್ಕೆ ತಂದಿರುವುದು ನಿಜ. ಸುಮಾರು ಒಂದು ವಾರದ ಹಿಂದೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಈ ಡೀಸೆಲ್ ಬೆಲೆ ಹೆಚ್ಚು ಮಾಡಿದ್ದರ ಹಿನ್ನಲೆಯಲ್ಲಿ ಖಾಸಗಿ ಬಸ್ಸಿನವರು ಎಲ್ಲ ಕಡೆ ಸಹಿತ ಸ್ವಲ್ಪ ಬೆಲೆಯನ್ನು ಜಾಸ್ತಿ ಮಾಡಲಿಕ್ಕೆ ಸಂಬಂಧಪಟ್ಟ ಹಾಗೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೋಲೀಸ್ ಅಧಿಕಾರಿಗಳ ಸಭೆ ಕರೆದು ಇದನ್ನು ಚರ್ಚೆಮಾಡಿ ಈ ಚರ್ಚೆಯಲ್ಲಿ ಸ್ವಲ್ಪ ಬೆಲೆಗಳನ್ನು ಜಾಸ್ತಿ ಮಾಡಿರತಕ್ಕಂಥಾದ್ದು. ಬೆಂಗಳೂರು ಮತ್ತು ಮಾಗಡಿ ಮಧ್ಯೆ ಇರತಕ್ಕಂಥ ಬಸ್ಸುಗಳ ಪ್ರಯಾಣ ಬೆಲೆಯನ್ನು ಮಾನ್ಯ ಯಡಿಯೂರಪ್ಪನವರು ಹೇಳಿದಹಾಗೆ ಹನ್ನೊಂದು ರೂಪಾಯಿ ಮಾಡಿರತಕ್ಕಂಥಾದ್ದು ನಿಜ. ಈ ವಿಚಾರವನ್ನು ಬಾಲಕೃಷ್ಣ ರವರು ಬಂದು ನನ್ನ ಜೊತೆಯಲ್ಲಿ ಪ್ರಸ್ತಾಪ ಮಾಡಿದ್ದರು ಈ ದಿವಸ ನಾನು ಸದನಕ್ಕೆ ಬರುವುದಕ್ಕೆ ಮುಂಚೆ ಮಾನ್ಯ ಜಿಲ್ಲಾಧಿಕಾರಿಗಳನ್ನು ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್ ಅವರನ್ನು ಕರೆದು ಇವತ್ತು ಸಾಯಂಕಾಲದೊಳಗಡೆ ಇದನ್ನು ಬಗೆಹರಿಸಲು ನೀವು ಪ್ರಯತ್ನ ಮಾಡಬೇಕು ಎನ್ನುವಂಥ ಸೂಚನೆಯನ್ನು ಸರ್ಕಾರದ ಪರವಾಗಿ ನಾನು ಈಗಾಗಲೇ ಕೊಟ್ಟಿದ್ದೇನೆ. ನಾನು ಇಲ್ಲಿಯೂ ಹೇಳುತ್ತೇನೆ. ಈ ಸದನವು ಮುಗಿದ ನಂತರ ಏಕೆಂದರೆ ನನ್ನ ಬೇಡಿಕೆಗಳು ಇದ್ದವು, ಮತ್ತು ಕೌನ್ಸಿಲ್‌ದಲ್ಲಿ ಕೆಲವು ಗಮನ ಸೆಳೆಯುವ ಸೂಚನೆಗಳು ಇದ್ದವು. ಇಲ್ಲದೇಹೋಗಿದ್ದರೆ ನಾನು ಜಿಲ್ಲೆ ಉಸ್ತುವಾರಿ ಮಂತ್ರಿ ಸಹ ಆಗಿದ್ದೇನೆ ಇದರಲ್ಲಿ ಏನೂ ಅಭ್ಯಂತರ ಇಲ್ಲ. ಅವರು ಸ್ವಲ್ಪ ಬೆಲೆಗಳನ್ನು ಜಾಸ್ತಿ ಮಾಡಿದ್ದಾರೆ. ಡೀಸಲ್ ಬೆಲೆ ಜಾಸ್ತಿಯಾಗಿರುವುದರಿಂದ ಇದನ್ನು ಮಾಡಿರಬಹುದು. ತಾವು ಹೇಳಿದಹಾಗೆ ಅದು ಅಸಮಂಜಸ ಇರಬಹುದು, ಬಹಳ ಜಾಸ್ತಿ ಇರಬಹುದು.

ಡಾ: ಹೆಚ್.ಸಿ. ಬಾಲಕೃಷ್ಣ:- ನನ್ನ ಪ್ರಶ್ನೆ ಇಷ್ಟೆ. ನಾಲ್ಕು ದಿವಸಗಳಿಂದ ಈ ಬಸ್ಸುಗಳು ನಿಂತಿವೆ. ಯಾವುದೇ ಬಸ್ಸು ಇಲ್ಲ. ಇದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ? ನಾಲ್ಕು ದಿವಸಗಳ ಹಿಂದೆಯೇ ಅಧಿಕಾರಿಗಳನ್ನು ಕರೆದು ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಏಕೆ ಆಗಲಿಲ್ಲ? ಎರಡನೇಯದಾಗಿ ಮಂಗಳವಾರ ಎಂಟು ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು ಮಾಗಡಿಯಿಂದ ಬೆಂಗಳೂರಿಗೆ ಬಿಟ್ಟಿದ್ದಾರೆ. ಆದರೆ ಮಾರನೇ ದಿವಸ ಒಂದೂ ಬಸ್ಸು ಇಲ್ಲದ ಹಾಗೆ ನಿಲ್ಲಿಸಿದ್ದಾರೆ. ಇದರ ಬಗ್ಗೆ ದಯವಿಟ್ಟು ಮಾನ್ಯ ಮಂತ್ರಿಗಳು ಹೇಳಬೇಕು. ನಾನು ನಿನ್ನೆ ದಿವಸ ಅವರ ಜೊತೆಯಲ್ಲಿ ಪ್ರಸ್ತಾಪ ಮಾಡಿದ ಸಮಯದಲ್ಲಿ ಮಂತ್ರಿಗಳು ಹೇಳಿದರು, ಅದು ಖಾಸಗೀಕರಣ ಆಗಿಲ್ಲ, ನಾವು ಅಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು ಓಡಿಸುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ನನ್ನ ಹತ್ತಿರ ಹೇಳಿದರು. ಅಂದರೆ ಆ ಮಾರ್ಗ ರಾಷ್ಟ್ರೀಕರಣ ಆಗಿಲ್ಲವೆಂಬ ಮಾತನ್ನು ಹೇಳಿದರು. ಅದರೆ ರಾಷ್ಟ್ರೀಕರಣವಾಗಿಲ್ಲದಿದ್ದರೂ ಅನೇಕ ಸಾರಿ ಖಾಸಗಿ ಬಸ್ಸುಗಳು ತೊಂದರೆ ಕೊಟ್ಟಾಗ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು ಮಾಗಡಿಗೆ ಓಡಿಸಿರುವುದನ್ನು ನಾವು ಈಗಾಗಲೇ ನೋಡಿದ್ದೇವೆ. ನಾನು ಶಾಸಕನಾದ ಮೇಲೆ ನಾಲ್ಕು ಬಾರಿ ಅವರು ಗಲಾಟೆ ಮಾಡಿದ ಸಂದರ್ಭದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು ಮಾಗಡಿಯಿಂದ

ಬೆಂಗಳೂರಿಗೆ ಓಡಿಸಿದ್ದಾರೆ. ಈಗ ಅದನ್ನು ಕೂಡ ಮಾಡಿಲ್ಲ. ನಾನು ಹೇಳುವುದು ಇಷ್ಟೆ ಬಸ್ ದರ ಜಾಸ್ತಿ ಮಾಡಬೇಕೆಂದರೆ ತಮ್ಮ ಮುಂದೆ ನಾವೂ ಬರುತ್ತೇವೆ, ಅವರೂ ಬರಲಿ ಅವರ ಕಷ್ಟವನ್ನು ಅವರು ಹೇಳಲಿ ಮತ್ತು ನಮ್ಮ ಕಷ್ಟವನ್ನು ನಾವು ಹೇಳುತ್ತೇವೆ. ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರು 210 ಪರ್ಮಿಟ್‌ಗಳನ್ನು ಹೊಂದಿದ್ದಾರೆ. ಆದರೆ ಅವರು ಓಡಿಸುತ್ತಿರುವುದು 40 ಬಸ್ಸುಗಳನ್ನು ಮಾತ್ರ. ರೇಟ್ ಜಾಸ್ತಿ ಮಾಡಲಿ. ಆದರೆ ಅವರು ಸರಿಯಾಗಿ ಬಸ್ಸುಗಳನ್ನು ಓಡಿಸುವುದಿಲ್ಲ. ಚನ್ನಪಟ್ಟಣ, ರಾಮನಗರಕ್ಕೆ ರಾಷ್ಟ್ರೀಕರಣ ಆಗಿಲ್ಲ. ಆದರೆ ಅಲ್ಲಿ ಪ್ಯಾರಲಲ್ ಬಸ್ಸುಗಳನ್ನು ಓಡಿಸುತ್ತಿರಲಿಲ್ಲವೆ? ನನ್ನ ಕ್ಷೇತ್ರದಲ್ಲಿ ಮಾತ್ರ ತೊಂದರೆ ಏಕೆ ಆಗುತ್ತದೆ? ನಾನು ಹೇಳುವುದು ಇಷ್ಟೆ. ತಾವು ಮಾತುಕತೆಗೆ ಕರೆಯಿರಿ. ನಾವೂ ಬರುತ್ತೇವೆ, ಅವರೂ ಬರಲಿ. ಖಾಸಗೀ ಬಸ್ಸಿನವರು ಮಾತುಕತೆ ಮುಗಿಯುವರೆಗೆ ಹಳೆಯ ದರದಲ್ಲಿ ಓಡಿಸಲಿ. ಮಾತುಕತೆ ಆದಮೇಲೆ ಮಂತ್ರಿಗಳು ಸ್ಟೇಟ್‌ಮೆಂಟ್ ಕೊಟ್ಟಮೇಲೆ ಜನರು ಅದನ್ನು ಒಪ್ಪಿಕೊಳ್ಳುತ್ತಾರೆ ಇಲ್ಲವೆಂದರೆ ಅವರು ಹಠ ಹಿಡಿದರೆ ಮಾನ್ಯ ಮಂತ್ರಿಗಳು ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು ಓಡಿಸಲಿ ನಾಲ್ಕು ದಿವಸಗಳಿಂದ ಅಲ್ಲಿ ಜನರಿಗೆ ತೊಂದರೆಯಾಗಿದೆ. ಅಲ್ಲಿಯ ಶಾಲಾಕಾಲೇಜುಗಳಿಗೆ ಹೋಗುವ ಮಕ್ಕಳಿಗೆ ತೊಂದರೆಯಾಗಿದೆ.

ಉಪಾಧ್ಯಕ್ಷರು:- ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕಷ್ಟೇ ಬರುತ್ತದೆ. ಮಂತ್ರಿಗಳಿಗೆ ಎಲ್ಲಾ ವಿಷಯ ಗೊತ್ತಿದೆ. ಅವರು ಉತ್ತರ ಹೇಳುತ್ತಾರೆ. ಅಲ್ಲಿಯವರೆಗೆ ತಾಳ್ಮೆ ಇಲ್ಲವೆಂದರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾಗಡಿ ನನ್ನ ಕ್ಷೇತ್ರ ಸಹಿತ ಹೌದು. ನಾನು ಎರಡು ಸಾರಿ ಲೋಕಸಭೆಗೆ ಅಲ್ಲಿ ನಿಂತಿದ್ದೇನೆ. ಅಲ್ಲಿಯ ಜನರಿಗೆ ಮಾನ್ಯಸದಸ್ಯರು ಹೇಳಿದಹಾಗೆ ತೊಂದರೆ ಆಗಿರತಕ್ಕಂಥಾದ್ದು ಸತ್ಯವಾದ ಸಂಗತಿ. ಖಾಸಗಿ ಬಸ್ಸಿನವರು ಅಲ್ಲಿ ಓಡಾಡದೇ ಇರತಕ್ಕಂಥಾದ್ದು ಸತ್ಯ ಸಂಗತಿ. ಕೆಲವು ಕಡೆಗಳಲ್ಲಿ ಪ್ಯಾರಲಲ್ ಆಪರೇಶನ್‌ಗೆ ಪರ್ಮಿಟ್ ತೆಗೆದುಕೊಂಡು ಕೆ.ಎಸ್.ಆರ್.ಟಿ.ಸಿ ಯವರು ಮಾಡುತ್ತಾ ಇರತಕ್ಕಂಥಾದ್ದು ಸತ್ಯವಾದ ಸಂಗತಿ ಇದರ ಬಗ್ಗೆ ಮಾನ್ಯ ಸದಸ್ಯರು ಹೇಳತಕ್ಕದ್ದರಲ್ಲಿ ಕಿಂಚಿತ್ತೂ ಸಹ ಅಸತ್ಯ ಇದೆಯೆಂದು ನಾನು ಹೇಳುವುದಿಲ್ಲ. ಎಲ್ಲಾ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ಈ ರೀತಿ ಸಮಸ್ಯೆ ಬಂದಾಗ ಸ್ವತಃ ನಾನು ಕುಳಿತುಕೊಂಡು ಖಾಜಿ ನ್ಯಾಯ ಮಾಡಬೇಕು ಎನ್ನುವುದು ಕಷ್ಟ ಎಂಬುದು ತಮಗೆ ಗೊತ್ತಿರುವ ವಿಚಾರ. ಆದ್ದರಿಂದಾಗಿ ಜಿಲ್ಲಾಧಿಕಾರಿಗಳು ಇವತ್ತು Motor Vehicles Act ಪ್ರಕಾರ ಆರ್.ಟಿ.ಎ. ಛೇರ್ಮನ್ ಇದ್ದಾರೆ. ಆರ್.ಟಿ.ಎ. ಛೇರ್ಮನ್‌ರಿಗೆ ನಾವು ಅಥಾರಿಟಿಯನ್ನು ಕೊಟ್ಟಿದ್ದೇವೆ, ಡೆಲಿಗೇಟ್ ಮಾಡಿದ್ದೇವೆ. ಬಹುಶಃ ಈಗಾಗಲೇ ಸಮಸ್ಯೆ ಬಗೆಹರಿದಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಬೆಳಗ್ಗೆ 11 ಗಂಟೆಗೆ ಇವತ್ತು ಬೆಂಗಳೂರು ಜಿಲ್ಲೆ ಆರ್.ಟಿ.ಎ. ಮಿಟಿಂಗ್‌ನ್ನು ಜಿಲ್ಲಾಧಿಕಾರಿಗಳು ಕರೆದಿದ್ದಾರೆ. ನನ್ನ ಸರ್ಕಾರಿ ಅಫಿಶಿಯಲ್ ರೆಸಿಡೆನ್ಸಿಗೆ ಎಸ್.ಪಿ. ಮತ್ತು ಡಿ.ಸಿ. ಯವರನ್ನು ಕರೆದು ಇವತ್ತೇ ಇದನ್ನು ಬಗೆಹರಿಸಬೇಕೆಂದು ಸೂಚನೆ ಕೊಟ್ಟಿದ್ದೇನೆ. ಒಂದು ಪಕ್ಷ ಇದು ಬಗೆಹರಿಯದೇ ಹೋದರೆ ಅವರು ಹೇಳುತ್ತಿರುವುದು ನಿಜ, ಪರ್ಮಿಟ್‌ಗಳನ್ನು ತೆಗೆದುಕೊಂಡು ಅವರ ಪ್ರಕಾರ ಬಸ್ಸುಗಳನ್ನು ಅವರು ಓಡಿಸುತ್ತಿಲ್ಲ. 100 ರಿಂದ

150 ಪರ್ಮಿಟ್‌ಗಳನ್ನು ಇಟ್ಟಕೊಂಡಿರತಕ್ಕಂಥಾದ್ದು ಸತ್ಯವಾದ ವಿಚಾರ. ಅವರು ಏನೂ ಸುಳ್ಳು ಹೇಳುತ್ತಿಲ್ಲ ಅಥವಾ ಅಸತ್ಯವನ್ನು ಸಹಿತ ನುಡಿಯುತ್ತಿಲ್ಲ. ಇದನ್ನೆಲ್ಲ ಸರಿಮಾಡಬೇಕು. ನನಗೆ ಸ್ವಲ್ಪ ಸಮಯ ಬೇಕು ಆದರೆ ತಾತ್ಕಾಲಿಕವಾಗಿ ಇದನ್ನು ಯಾವ ರೀತಿ ಬಗೆಹರಿಸಬೇಕೆಂದು ನಾನು ಪ್ರಾಮಾಣಿಕವಾಗಿ ಸದನದಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ಉತ್ತರ ಕೊಟ್ಟ ನಂತರ ಜಿಲ್ಲಾಧಿಕಾರಿಗಳನ್ನು ಎಸ್.ಪಿ.ಯವರನ್ನು ನಾನು ಇಲ್ಲೇ ಕರೆದು ಏನಾಗಿದೆಯೆಂದು ತಿಳಿದುಕೊಂಡು ಒಂದು ಸೂತ್ರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ.

ಉಪಾಧ್ಯಕ್ಷರು:- ಈಗ ವರದಿಯನ್ನು ಒಪ್ಪಿಸುವುದು. ಶ್ರೀ ಹೆಚ್.ಕೆ. ಕುಮಾರಸ್ವಾಮಿಯವರು ವರದಿಯನ್ನು ಒಪ್ಪಿಸುವುದು.

ಶ್ರೀ ಹೆಚ್.ಸಿ. ಬಾಲಕೃಷ್ಣ:- ಮಾನ್ಯ ಉಪಾಧ್ಯಕ್ಷರೇ . . .

(ಗೊಂದಲ)

ಉಪಾಧ್ಯಕ್ಷರು:- ಈ ತರಹ ಮಾಡಬಾರದು. ಅವರು ಈಗಾಗಲೇ ಸಾಕಷ್ಟು ಹೇಳಿದ್ದಾರೆ. ನೀವು ನಿಮ್ಮ ವರದಿಯನ್ನು ಒಪ್ಪಿಸಿರಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ಸೂಲನಾಯಕನಹಳ್ಳಿಯಲ್ಲಿ ಪರಿಶಿಷ್ಟ ಜಾತಿಯವರ ಮೇಲೆ . . .

(ಗೊಂದಲ. ಮಾನ್ಯ ಸದಸ್ಯರಾದ ಶ್ರೀ ಬಾಲಕೃಷ್ಣ ಅವರು ಮಾತನಾಡುತ್ತಲೇ ಇದ್ದರು)

ಉಪಾಧ್ಯಕ್ಷರು:- ಶೂನ್ಯವೇಳೆಯಲ್ಲಿ ಈ ರೀತಿ ಮಾತನಾಡಿದರೆ ಹೇಗೆ? ಅವರು ಹೇಳುವುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಕುಮಾರಸ್ವಾಮಿಯವರು ವರದಿಯನ್ನು ಒಪ್ಪಿಸಿರಿ.

(5) ವರದಿಯನ್ನೊಪ್ಪಿಸುವುದು

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಅಧ್ಯಕ್ಷರು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ):- ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ಸೂಲನಾಯಕನಹಳ್ಳಿಯಲ್ಲಿ ಪರಿಶಿಷ್ಟ ಜಾತಿಯವರ ಮೇಲೆ ನಡೆಯಿತೆನ್ನಲಾದ ದೌರ್ಜನ್ಯ ಹಾಗೂ ಮನೆಗಳನ್ನು ಸುಟ್ಟು ಹಾಕಿರುವ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು:- ಈಗ ಸಾರಿಗೆ ಸಚಿವರು ತಮ್ಮ ಉತ್ತರವನ್ನು ಪ್ರಾರಂಭ ಮಾಡುತ್ತಾರೆ. ಬೇಡಿಕೆಗಳ ಮೇಲೆ ಉತ್ತರ ಕೊಡುವಾಗ ಇದಕ್ಕೆ ಉತ್ತರಕೊಟ್ಟು ಬಿಡಿ.